# ಚಿಂತಾಮಣಿಯಲ್ಲಿ ಕಂಡ ಉಬ್ಬು ಶಿಲ್ಪ



**ಸಂಪೂರ್ಣವಾಗಿ ಉಬ್ಬು ಶಿಲ್ಪ ಕಲೆಯನ್ನು ಪ್ರತಿಬಿಂಬಿಸುವ ಕನ್ನಿಕಾ ಪರಮೇಶ್ವರಿ ದೇವಾಲಯಗಳು ದಕ್ಷಿಣ ಭಾರತದ ವಿಶಿಷ್ಟ ಶಿಲ್ಪಪರಂಪರೆಗೆ ಸಾಕ್ಷಿ.**

■ ಚಿತ್ರ– ಲೇಖನ:
**ಜಿ.ನಾಗೇಂದ್ರ**

ಆಂಧ್ರ ಪ್ರದೇಶದ ಪಶ್ಚಿಮ ಗೋದಾವರಿ ಜಿಲ್ಲೆಯಲ್ಲಿರುವ ವಾಸವಿ ಕನ್ನಿಕಾ ಪರಮೇಶ್ವರಿ ಒಂದು ಪ್ರಮುಖ ದೇವಾಲಯ. ತಮಿಳುನಾಡು ಮತ್ತು ಕರ್ನಾಟಕ ರಾಜ್ಯಗಳಲ್ಲೂ 40ಕ್ಕೂ ಅಧಿಕ ಕನ್ನಿಕಾ ಪರಮೇಶ್ವರೀ ದೇವಾಲಯಗಳಿವೆ.

ಕರ್ನಾಟದಲ್ಲಿರುವ ಕನ್ನಿಕಾ ಪರಮೇಶ್ವರೀ ದೇವಾಲಯಗಳ ಪೈಕಿ, ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ನಗರದ ದೇವಾಲಯವು ವಿಶಿಷ್ಟವಾದ ಶಿಲ್ಪಕಲೆಯನ್ನು ಹೊಂದಿದ್ದು ಜನರನ್ನು ಆಕರ್ಷಿಸುತ್ತಿದೆ. ನಗರದ ಡೈಮಂಡ್ ಟಾಕೀಸ್ ರಸ್ತೆಯಲ್ಲಿರುವ ಈ ದೇವಾಲಯವು ಸುಮಾರು ಎರಡು ಶತಮಾನಗಳ ಹಿಂದೆ ವೈಶ್ಯ ಕುಲಬಾಂಧವರಿಂದ ನಿರ್ಮಿಸಲ್ಪಟ್ಟಿದ್ದು, ಉಬ್ಬು ಶಿಲ್ಪ ಕಲೆಯ ದೃಷ್ಟಿಯಿಂದ ವಿಶಿಷ್ಟವಾಗಿದೆ.

ನಾಲ್ಕು ಆನೆಗಳು ಹೊತ್ತು ನಿಂತಿರುವ ಪರಿಕಲ್ಪನೆಯಲ್ಲಿ ಸಂಪೂರ್ಣವಾಗಿ ಕಲ್ಲು ಚಪ್ಪಡಿಗಳಿಂದ ನಿರ್ಮಿಸಲಾಗಿರುವ ಈ ದೇವಾಲಯವು ನಾಲ್ಕೂ ದಿಕ್ಕುಗಳ ಹೊರ ಭಿತ್ತಿಗಳಲ್ಲಿ ನೂರಾರು ವಿಭಿನ್ನ ಉಬ್ಬು ಶಿಲ್ಪಗಳನ್ನು ಹೊಂದಿದೆ. ಹಲವಾರು ದೇವ ದೇವತೆಗಳ, ಋಷಿ ಮುನಿಗಳ, ಪ್ರಾಣಿಗಳ ಉಬ್ಬು ಶಿಲ್ಪಗಳು ನೋಡುಗರನ್ನು ಅಚ್ಚರಿಗೊಳಿಸುತ್ತವೆ. ಬಹುತೇಕ ದೇವಾಲಯಗಳಲ್ಲಿ ಇರುವಂತೆ ಇಲ್ಲಿಯೂ ಸಹ ಕಾಮಶಾಸ್ತ್ರವನ್ನು ಪ್ರತಿಬಿಂಬಿಸುವ ಹಲವಾರು ಭಂಗಿಗಳ ಲೈಂಗಿಕ ಶಿಲ್ಪಗಳಿವೆ.

ಪ್ರಮುಖವಾಗಿ ಇಲ್ಲಿ ಕೆಲವು ಶಿಲ್ಪಗಳನ್ನು ಉಲ್ಲೇಖಿಸಬಹುದು. ರಾಮಾಯಣಕ್ಕೆ ಸಂಬಂಧಿಸಿದಂತೆ ಹನುಮಂತ ಅಶೋಕ ವನದಲ್ಲಿ ಸೀತೆಯನ್ನು ಭೇಟಿಯಾಗುವ ದೃಶ್ಯ, ರಾಮನ ಪಟ್ಟಾಭಿಷೇಕವನ್ನು ವೀಕ್ಷಿಸುತ್ತಿರುವ ಪ್ರಜೆಗಳು, ಪನ್ನಗ ಶಯನನಾದ ವಿಷ್ಣುವಿನ ಸೇವೆ ಮಾಡುತ್ತಿರುವ ಲಕ್ಷ್ಮೀ, ಪಂಚಮುಖಿ ಆಂಜನೇಯ, ವಿರಳವಾಗಿ ಕಾಣಸಿಗುವ ಹತ್ತು ತಲೆ ಹಾಗೂ 20 ಬಾಹುಗಳನ್ನು ಹೊಂದಿರುವ ರಾವಣ, ಮಹಾಭಾರತದ ಯುದ್ಧಕ್ಕೆ ಹೋಗುತ್ತಿರುವ ಸೈನಿಕರು, ಹಿರಣ್ಯಕಶಿಪುವನ್ನು ವಧಿಸುತ್ತಿರುವ ಉಗ್ರ ನರಸಿಂಹ, ಶಿವ ಪುರಾಣದಲ್ಲಿ ಉಲ್ಲೇಖಿಸಲಾದ ಬ್ರಹ್ಮ ಕಪಾಲದ ಘಟನೆ, ಶಿವಲಿಂಗಕ್ಕೆ ತನ್ನ ಕೆಚ್ಚಲಿನಿಂದಲೇ ಹಾಲನ್ನು ಹಿಂಡಿ ಅಭಿಷೇಕ ಮಾಡುತ್ತಿರುವ ಕಾಮಧೇನು ಮೊದಲ ನೋಟಕ್ಕೇ ಎಲ್ಲರನ್ನು ಆಕರ್ಷಿಸುತ್ತವೆ.



